ಒ.ಎಸ್.ನಂ:104/2022
ಪಿ.ಡಬ್ಲೂ.1

<u>ದಿ:**03.08.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು:-</u>ಪ್ರತಿವಾದಿ ಪರ ಶ್ರೀ.T.M.S., ವಕೀಲರಿಂದ:-

ನಾನು ಸಲ್ಲಿಸಿದ ವಾದ ಪತ್ರದಲ್ಲಿ ದಾವಾಸ್ವತ್ತಿನ ಐಟಂ ನಂ:1 ಚೆಕ್‌ಬಂದಿ ದಕ್ಷಿಣ ದಿಕ್ಕಿಗೆ Cleanmax ರವರಿಗೆ ಜಮೀನು ಎಂದು ನಮೂದು ಇದ್ದು, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯ ಜಮೀನು ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ಪ್ರತಿವಾದಿ ಸುಮಾ ರವರು Cleanmax ಇವರಿಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು 2011 ರಲ್ಲಿ ತಿಪ್ಪೆರುದ್ರಪ್ಪರವರ ಹೆಂಡತಿ ವೀರಬಸಮ್ಮರವರು ನಿದನರಾಗಿ ನಂತರ ತಿಪ್ಪೆರುದ್ರಪ್ಪರವರು ನಮ್ಮ ಬಳಿ ಬಂದು ವಾಸವಿರುತ್ತಾರೆ ಎಂದು ಹೇಳಿರುತ್ತೀರಾ ಎಂದರೆ ಸರಿಯಲ್ಲ. ನಿಪಿ11 ವಿಲ್‌ನಲ್ಲಿ ಸರ್ವೆ ನಂ:29/2 ರ ಜಮೀನಿನ ವಿಸ್ತೀರ್ಣ ನಿಖರವಾಗಿ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ11 ವಿಲ್ ಪತ್ರದ ಮಾಹಿತಿ ನಮಗೆ ತಿಪ್ಪೆರುದ್ರಪ್ಪರವರು ವಿಲ್ ಮಾಡಿದ ನಂತರ ನೀಡಿರುತ್ತಾರೆ ಆಗ ತಿಳಿದಿರುತ್ತದೆ. ವಾದಪತ್ರದಲ್ಲಿ ನಾನು ವಿಲ್ ಪತ್ರವು ಟ್ರಂಕ್ ನಲ್ಲಿ ಇಟ್ಟ ಬಗ್ಗೆ ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ11 ವಿಲ್ ನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಇಲ್ಲಿಯವರೆಗೆ ನಮ್ಮ ಹೆಸರಿಗೆ ಬದಲಾವಣೆಯಾಗಿರುವುದಿಲ್ಲ ಎಂದರೆ ಸರಿ. ನಾವು ದಾವಾ ಆಸ್ತಿ ನಲ್ಲಿ ಎಂದಿಗೂ ಸಹ ಅನುಬೋಗ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

ಸಹಿ

ಸಿವಿಲ್ ನ್ಯಾಯಾಧೀಶರು, ಜಗಳೂರು